**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಃ ಪ್ರತಿವಾದಿ ಡಿ5(ಎ) ಮತ್ತು (ಬಿ) ಪರ ವಕೀಲರಾದ**
**ಶ್ರೀ ಎಂ ಡಿ ಎಸ್ ರವರಿಂದಃ-**
**ಪಿ. ಡಬ್ಲ್ಯೂ. 1. ದಿಃ 16-07-2018. ಓ ಎಸ್ ನಂ ಃ 127/2013**

5ನೇ ಪ್ರತಿವಾದಿಯನ್ನು ನಾನು ಚಿಕ್ಕವಯಸ್ಸಿನಲ್ಲಿ ನೋಡಿರುತ್ತೇನೆ. ನಂತರ ಅವರನ್ನು ನಾನು ನೋಡಿಲ್ಲ. 5ನೇ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಐ ಎ ನಂ. 1 ರಿಂದ 4 ರ ಪ್ರಮಾಣ ಪತ್ರಗಳಲ್ಲಿ ಹೇಳಿರುವ ಸಂಗತಿಗಳನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಯಿಸಿರುತ್ತೇನೆ. ಆದರೆ ನನ್ನ ವಕೀಲರು ಅದರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿಗೆ 1. ಶೇಖರಯ್ಯ, 2. ಸೋಮಶೇಖರ್, 3, ಶಿವಗಂಗಮ್ಮ 4. ಕುಮಾರ, 5. ಶಿವಾನಂದ, ಮತ್ತು 7. ರೇಣುಕಯ್ಯ ಎನ್ನುವ ಮಕ್ಕಳು ಇರುತ್ತಾರೆ. 5ನೇ ಪ್ರತಿವಾದಿಗೆ ಸದರಿ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಮತ್ತು 1 ಹೆಣ್ಣು ಮಗಳು ಒಟ್ಟು 4 ಜನ ಮಕ್ಕಳು ಇರುತ್ತಾರೆಂದರೆ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ.

5ನೇ ಪ್ರತಿವಾದಿ ದಿಃ 06-02-2012 ರಂದು ಮರಣ ಹೊಂದಿದ್ದು, ಪ್ರಸ್ತುತ ದಾವೆಯನ್ನು ಮರಣಹೊಂದಿರುವ ವ್ಯಕ್ತಿಯ ಮೇಲೆ ದಾವಾ ಹೂಡಿರುತ್ತೇವೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ

ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**